2018 ಕ.ತೀ.ವ 371

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

## ಡನೋನ್ ನಾರಂಗ್ ಬೆವರೆಜಸ್ ಪ್ರೈ.ಲಿ. –ವಿರುದ್ಧ– ಕರ್ನಾಟಕ ಸರ್ಕಾರ (ಇನ್ಸ್‌ಪೆಕ್ಟರ್, ಲೀಗಲ್ ಮೆಟ್ರಾಲೊಜಿ) ಮತ್ತು ಇನ್ನೊಬ್ಬರು*

ಕಾನೂನು ಮಾಪನ ಅಧಿನಿಯಮ, 2009ರ 18ನೇ ಪ್ರಕರಣ ಮತ್ತು ನಿಯಮ 2(ಎಚ್)

ಅರ್ಜಿದಾರ ಕಂಪನಿಯು ತಂಪುಪಾನೀಯದ ಬಾಟಲಿಗಳ ಮೇಲೆ ಗರಿಷ್ಟ ಮಾರಾಟ ಬೆಲೆ, ತಯಾರಾದ ದಿನಾಂಕ ಇತ್ಯಾದಿಗಳನ್ನು ಮುದ್ರಿಸದೇ ಈ ಕಾಯಿದೆಯ ನಿಯಮಾವಳಿಗಳನ್ನು ಪಾಲನೆ ಮಾಡದೇ ಇರುವ ಸಂದರ್ಭದಲ್ಲಿ, ಕಂಪನಿಯ ಬಾಟಲಿಗಳನ್ನು ವಶಪಡಿಸಿಕೊಂಡು ಕಂಪನಿಯ ಅಧಿಕಾರಿಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ ಅಧಿಕಾರವನ್ನು ಪ್ರಶ್ನಿಸಲಾಗಿದೆ.

ನಿಯಮ 8(2) ಕೇವಲ ತಂಪುಪಾನೀಯದ ಬಾಟಲಿಗಳ ಕುರಿತು ನಿಯಮಗಳನ್ನು ರೂಪಿಸಿದೆ. ನಿಯಮ 8(1)ರ ಅಡಿ ಬಾಟಲಿಗಳ ಮೇಲೆ ಏನೇನನ್ನು ಪ್ರದರ್ಶಿಸಬೇಕೆಂಬ ಕಡ್ಡಾಯ ನಿಯಮವಿರುವಾಗ ನಿಯಮ 8ರ ಅಡಿ ಕೇವಲ ಗರಿಷ್ಟ ಮಾರಾಟ ಬೆಲೆಯನ್ನು ಬಾಟಲಿಗಳ ಮೇಲೆ ಮುದ್ರಿಸಿಲ್ಲ ಎಂಬ ಕಾರಣಕ್ಕೆ ಸರಕುಗಳನ್ನು ವಶಪಡಿಸಿಕೊಂಡ ಕ್ರಮ ಕಾನೂನು ಬಾಹಿರವಾಗಿದೆ.

ಅಲ್ಲದೇ ಆರೋಪವು ಅರ್ಜಿದಾರ ಕಂಪನಿಯ ಮೇಲೆ ಇದ್ದು, ಕಂಪನಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡದೇ, ಕಂಪನಿಯ ಒಬ್ಬ ಅಧಿಕಾರಿಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವುದು ಸಹ ಕಾನೂನು ಬಾಹಿರವಾಗಿದೆ. ಆದ್ದರಿಂದ ಮ್ಯಾಜಿಸ್ಟ್ರೇಟರ ಎದುರು ನಡೆಯುತ್ತಿರುವ ಪ್ರಕರಣವು ಕಾನೂನಿನ ಅಡಿ ಸೂಕ್ತವಲ್ಲ ಎಂದು ತೀರ್ಮಾನಿಸಲಾಗಿದೆ.

*ರಿಟ್ ಅರ್ಜಿ ಸಂ. 13060/2013 (ಜಿಎಂ–ಆರ್‌ಇಎಸ್), ದಿನಾಂಕ: 30ನೇ ಆಗಸ್ಟ್, 2016.

**ಕಂಪನಿಯ ಸರಕುಗಳನ್ನು ವಶಪಡಿಸಿಕೊಂಡಿದ್ದರಿಂದ ಅವು ಮಾರಾಟಕ್ಕೆ ಅನರ್ಹಗೊಂಡು ಕಂಪನಿಯು ನಷ್ಟವನ್ನು ಅನುಭವಿಸಿರುವುದರಿಂದ, ಕಂಪನಿಗೆ ಪರಿಹಾರವನ್ನು ನೀಡಲು ಹೈಕೋರ್ಟಿನ ರಿಜಿಸ್ಟ್ರಾರ್ ಅವರು ವಿಚಾರಣೆಯನ್ನು ಮಾಡಿ ಪರಿಹಾರ ಹಣವನ್ನು ನಿರ್ಧರಿಸಲು ಆದೇಶಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. (2012) 5 ಎಸ್‌ಸಿಸಿ 661*
*ಅನಿತಾ ಹಾಡ –ವಿರುದ್ಧ– ಗಾಡ್‌ಫಾದರ್ ಟ್ರಾವೆಲ್ಸ್ ಅಂಡ್ ಟೂರ್ಸ್ ಪ್ರೈವೇಟ್ ಲಿಮಿಟೆಡ್* *(ಉಲ್ಲೇ) 5*

*2. (2011) 1 ಎಸ್‌ಸಿಸಿ 176*
*ಪೆಪ್ಸಿಕೋ ಇಂಡಿಯಾ ಹೋಲ್ಡಿಂಗ್ಸ್ (ಪ್ರೈ) ಲಿಮಿಟೆಡ್ –ವಿರುದ್ಧ– ಫುಡ್ ಇನ್ಸ್‌ಪೆಕ್ಟರ್* *(ಉಲ್ಲೇ) 5*

ಅರ್ಜಿದಾರರ ಪರ: ಶ್ರೀ ಪ್ರದೀಪ್ ನಾಯಕ್ ಮತ್ತು ಶ್ರೀ ಅರುಣ್ ಶ್ರೀಕುಮಾರ್, ವಕೀಲರು;
1ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಆರ್. ಅನಿತ, ಸರ್ಕಾರಿ ವಕೀಲರು,
2ನೇ ಪ್ರತ್ಯರ್ಜಿದಾರರಿಗೆ ನೋಟಿಸ್ ಜಾರಿ ಮಾಡಿದೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಮಾನ್ಯ ಸರ್ಕಾರಿ ವಕೀಲರ ಅಹವಾಲನ್ನು ಆಲಿಸಿರುತ್ತೇವೆ.

2. ಪ್ರಕರಣಗಳ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

ಅರ್ಜಿದಾರ ಸಂಸ್ಥೆಯಲ್ಲಿ 'ಕ್ವಾ' ಎಂಬ ಬ್ರಾಂಡ್ ಹೆಸರಿನಡಿಯಲ್ಲಿ ಪ್ಯಾಕು ಮಾಡಿದ ಸ್ವಾಭಾವಿಕ ಖನಿಜಯುಕ್ತ ನೀರಿನ ತಯಾರಿಕೆ ಹಾಗು ಹಂಚಿಕೆಯಲ್ಲಿ ನಿರತವಾಗಿರುವ ಖಾಸಗಿ ನಿಗಮಿತ ಕಂಪನಿಯೊಂದು ಹೇಳಬೇಕಾಗಿರುತ್ತದೆ. ಅರ್ಜಿದಾರರು ವಿತರಿಸುವ ಬಾಟಲಿಗಳು, ಉತ್ಪಾದಕರ ವಿಳಾಸ, ಪೋಷಕಾಂಶಗಳ ವಿವರಗಳನ್ನು ಒಳಗೊಂಡಿರುವ ದ್ರವದ ಪ್ರಮಾಣ ಮುಂತಾದವುಗಳನ್ನು ಒಳಗೊಂಡಂಥ ಪಟ್ಟಿಯನ್ನು ಪ್ರತಿಯೊಂದು ಬಾಟಲಿಯ ಮೇಲೆ ಅಂಟಿಸಿರುವುದು ಸಾಮಾನ್ಯವಾಗಿರುವಂಥದ್ದಾಗಿದ್ದು, ಒದಗಿಸಬೇಕೆಂದು ಅಗತ್ಯಪಡಿಸಿದ ಎಲ್ಲಾ ಪೂರ್ವ ಮುದ್ರಿತ ಮಾಹಿತಿಯನ್ನು ಒಳಗೊಂಡ ಬಾಟಲಿಯ ಮೇಲೆ ಅರ್ಜಿದಾರರು ಅಂಟಿಸಿರುವ ಪಟ್ಟಿಗಳನ್ನು ಹೊಂದಿದ್ದವೆಂದು ಕ್ಲೇಮು ಮಾಡಲಾಗಿರುತ್ತದೆ. ಆದಾಗ್ಯೂ, ಉತ್ಪಾದನಾ ಬ್ಯಾಚ್ ಸಂಖ್ಯೆಗಳು, ತಯಾರಾದ ದಿನಾಂಕ ಹಾಗೂ ಮಾರಾಟದ ಬೆಲೆಗಳ ಒಂದು ಬ್ಯಾಚ್‌ನಿಂದ ಮತ್ತೊಂದು ಬ್ಯಾಚ್‌ಗೆ ಅಥವಾ ಕಾಲ ಕಾಲಕ್ಕೆ ಬದಲಾಗುವುದರಿಂದ ತಯಾರಿಕಾ ಸರತಿಯ ಮೇಲಿರುವ ಬಾಟಲಿಯ ಮೇಲೆ ನೇರವಾಗಿ ಮುದ್ರಿಸಬೇಕೆಂದು ಹೇಳಲಾಗಿರುತ್ತದೆ. ಇದು 'ಆನಲೈನ್ ಮುದ್ರಣ' ವೆಂದೂ ಪ್ರಚಾರವಾಗಿದ್ದು. ಇದು ಬಾಟಲಿ ನೀರಿನ್ನು ತಯಾರಿಸುವ ಸುಪ್ರಸಿದ್ಧ ತಯಾರಕರು ಅನುಸರಿಸುವ ಸಾಮಾನ್ಯ ಪದ್ಧತಿಯಾಗಿರುತ್ತದೆ. ಹಾಗಾಗಿ, ಅರ್ಜಿದಾರರು, ಕಾನೂನಾತ್ಮಕ ಮಾಪನ (ಪ್ಯಾಕುಗೊಂಡ ಸರಕುಗಳು) ನಿಯಮಗಳು, 2011 (ಇನ್ನುಮುಂದೆ ಸಂಕ್ಷಿಪ್ತತೆಗಾಗಿ "ಎಲ್‌ಎಂಪಿಸಿ ನಿಯಮಗಳು" ಎಂದು ಉಲ್ಲೇಖಿಸಲಾಗಿರುತ್ತದೆ)ರ 2(ಹೆಚ್) ಹಾಗು 8 ರ ಓದಿನೊಂದಿಗೆ ಕಾನೂನು ಮಾಪನ ಅಧಿನಿಯಮ, 2009 (ಇನ್ನುಮುಂದೆ ಸಂಕ್ಷಿಪ್ತತೆಗಾಗಿ ಎಲ್‌ಎಂ ಅಧಿನಿಯಮ ಎಂದು ಉಲ್ಲೇಖಿಸಲಾಗಿರುತ್ತದೆ)ರ 18ನೇ ಪ್ರಕರಣಕ್ಕನುಸಾರವಾಗಿ ದೃಢೀಕರಿಸಿ ಪಾಲಿಸಬೇಕೆಂದು ವಾದಿಸಲಾಗಿರುತ್ತದೆ.

ಪ್ರತ್ಯರ್ಜಿದಾರ ಸಂ.1 ಆಗಿರುವ ಇನ್‌ಸ್ಪೆಕ್ಟರ್, ಕಾನೂನು ಮಾಪನ ಇಲಾಖೆ ಇವರು ಎಲ್‌ಎಂ ಅಧಿನಿಯಮದ 15(1)(ಬಿ) ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿ 17.05.2012 ರಂದು ಆದೇಶವನ್ನು ಹೊರಡಿಸಿದ್ದು, ಆ ಮಟ್ಟಿಗೆ,

ಎ. ಕ್ವಾ ನೈಸರ್ಗಿಕ ಖನಿಜಯುಕ್ತ ನೀರಿನ 65907 ಬಾಟಲುಗಳನ್ನು ಒಳಗೊಂಡ ದಾಸ್ತಾನನ್ನು ವಶಪಡಿಸಿಕೊಂಡು ಮೊಹರು ಮಾಡಲಾಗಿರುತ್ತದೆ; ಹಾಗೂ

ಬಿ. ಸದರಿ ವಶಪಡಿಸಿಕೊಂಡ ಸರಕನ್ನು ಮಾರಾಟಮಾಡುವುದಿಲ್ಲ ಅಥವಾ ಅನ್ಯಥಾ ವಿಲೆ ಮಾಡುವುದಿಲ್ಲವೆಂಬ ಮುಚ್ಚಳಿಕೆಯನ್ನು ಪಡೆದುಕೊಂಡ ತರುವಾಯ ದಸ್ತಾನನ್ನು ಅರ್ಜಿದಾರರ ಹಾಗೂ ಪ್ರತ್ಯರ್ಜಿದಾರ ಸಂ.2ರ ಅಭಿರಕ್ಷೆಯಲ್ಲಿ ಇರುತ್ತದೆ.

ಮೇಲಿನ ಸದರಿ ಆದೇಶವು, ಗರಿಷ್ಟ ಮಾರಾಟ ಬೆಲೆ (ಎಂಆರ್‌ಪಿ) ಯನ್ನು ಬಾಟಲಿನ ಲೇಬಲಿನ ಮೇಲೆ ಮುದ್ರಿಸುವುದಕ್ಕೆ ಬದಲು ಬಾಟಲಿನ ಮೇಲ್ಭಾಗದಲ್ಲಿ ಘೋಷಿಸಲಾಗಿದೆಯೆಂಬ ಆಧಾರದ ಮೇಲೆ ನಿರೂಪಿತಲಾಗಿದೆ. ಪ್ರತ್ಯರ್ಜಿದಾರ ಸಂ.1 ರವರೂ ಸಹ, ಬಾಟಲುಗಳ ಮೇಲೆ ಅಂಟಿಸಿರುವ ಲೇಬಲ್‌ಗಳಲ್ಲಿ ಮಾರಾಟದ ಬೆಲೆಯನ್ನು ಮುದ್ರಿಸದೆ ಅರ್ಜಿದಾರರು ಅಪರಾಧವನ್ನು ಎಸಗಿದ್ದಾರೆಂದು ಆಪಾದಿಸಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯ, ಸಂಚಾರಿ ನ್ಯಾಯಾಲಯ–1, ಬೆಂಗಳೂರು ಇವರ ಮುಂದೆ ದೂರನ್ನು ದಾಖಲಿಸಿರುತ್ತಾರೆಂದೂ ಸಹ ಹೇಳಲಾಗಿದೆ. ಪ್ರತ್ಯರ್ಜಿದಾರ ಸಂ.1, ವಾಸ್ತವವಾಗಿ ಬಾಟಲಿನ ಮೇಲೆ ನೇರವಾಗಿ ಮುದ್ರಿತವಾಗಿರುವುದನ್ನು ಮರೆಮಾಚುತ್ತಿದ್ದಾರೆಂದು ಹೇಳಲಾಗಿರುತ್ತದೆ.

ಅರ್ಜಿದಾರರು, ದಿನಾಂಕ 23.05.2012 ರಂದಿನ ಪತ್ರದ ಮೂಲಕ ಆರೋಪಿಸಿರುವಂಥ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸಿರುವುದಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸಿ ಪ್ರತ್ಯರ್ಜಿದಾರ ಸಂ.1 ರವರಿಗೆ ಪತ್ರವನ್ನು ಬರೆದಿರುತ್ತಾರೆಂದು ಹೇಳಲಾಗಿರುತ್ತದೆ.

ಪ್ರತ್ಯರ್ಜಿದಾರ ಸಂ.1 ರವರು, ಒಂದು ಲೇಬಲ್‌ನ್ನು ಒಂದು ಪ್ಯಾಕೇಜಿಗೆ ಅಂಟಿಸಿದಾಗ, ಎಲ್ಲಾ ಮಾಹಿತಿಯನ್ನು ಲೇಬಲ್ ಮೇಲೆಯೆ ಉಪಬಂಧಿಸಿರಬೇಕು ಹಾಗು ಎಲ್‌ಎಂಪಿಸಿ ನ್ಯಾಯಾಲಯಗಳ ಅಡಿಯಲ್ಲಿ ಲೈನ್ ಮೇಲಿನ ಮುದ್ರಣವನ್ನು

ಒಪ್ಪಿಕೊಂಡಿರಲಾಗಿರುವುದಿಲ್ಲವೆಂದು ಸೂಚಿಸಿ ಅರ್ಜಿದಾರರಿಗೆ ಉತ್ತರಿಸಿರುತ್ತಾರೆಂದು ಹೇಳಲಾಗಿರುತ್ತದೆ.

ಭಾರತೀಯ ಪಾನೀಯ ಸಂಸ್ಥೆಯು, ಪ್ಯಾಕುಗೊಂಡ ಕುಡಿಯುವ ನೀರಿನ ಬಾಟಲಿನ ಮೇಲ್ಭಾಗ ಅಥವಾ ತುದಿಯ ಮೇಲೆ ಗರಿಷ್ಟ ಮಾರಾಟ ಬೆಲೆಯನ್ನು ಮುದ್ರಿಸುವ ಸಂಬಂಧದಲ್ಲಿ ಸ್ಪಷ್ಟನೆಯನ್ನು ಕೋರಿ ನಿರ್ದೇಶಕರು, ಕಾನೂನು ಮಾಪನ ಗ್ರಾಹಕ ವ್ಯವಹಾರಗಳ ಇಲಾಖೆಗೆ 20.06.2012 ರಂದು ಮನವಿಯನ್ನು ಮಾಡಿರುತ್ತದೆಯೆಂಬುದು ತಿಳಿದುಬಂದಿರುತ್ತದೆ. ಗರಿಷ್ಟ ಮಾರಾಟ ಬೆಲೆಯನ್ನು ಮುದ್ರಿಸಲು ಸ್ಥಾವರಗಳಲ್ಲಿ ಇಂಕ್–ಜೆಟ್ ಕೋಡಿಂಗ್ ಮಶೀನ್‌ಗಳನ್ನು ಸ್ಥಾಪಿಸಲಾಗಿದೆಯೆಂದು ಅವರ ಗಮನಕ್ಕೆ ತರಲಾಗಿರುತ್ತದೆ.

ಅದರೊಂದಿಗೆ, ಎಲ್‌ಎಂಪಿಸಿ ನಿಯಮಗಳ 8ನೇ ನಿಯಮದಡಿಯಲ್ಲಿ, ಗರಿಷ್ಟ ಮಾರಾಟ ಬೆಲೆ, ತಯಾರಾದ ದಿನಾಂಕ ಮುಂತಾದ ಮಾಹಿತಿಗಳನ್ನು ಪ್ರಧಾನ ಪ್ರದರ್ಶಕ ಪಟ್ಟಿ (ಪಿಡಿಪಿ)ಯ ಮೇಲೆ ಪ್ರದರ್ಶಿಸಬೇಕೆಂದು ಅಗತ್ಯಪಡಿಸಲಾಗಿರುತ್ತದೆ. ಅದರೊಂದಿಗೆ 2(ಹೆಚ್) ನಿಯಮವು ಬಾಟಲ್‌ಗಳ ಲೇಬಲ್ ಒಳಗೊಂಡಿರುವಂಥ ಪಿಡಿಪಿ ಹಾಗೂ ಬಾಟಲ್ ಮೇಲೆಯೆ ಮಾಡಿರುವ ಘೋಷಣೆಗಳನ್ನು ಪರಿಭಾಷಿಸಿರುತ್ತದೆ.

ಮುಂದುವರೆದು, ನಿಯಮಗಳ 4ನೇ ನಿಯಮವು ಪ್ಯಾಕೇಜ್ ಮೇಲೆ ಹಾಗು ಅದಕ್ಕೆ ಅಂಟಿಸಿರುವ, ಲೇಬಲ್ ಮೇಲೆ ಇರಬೇಕಾದ ಘೋಷಣೆಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆ.

ನಿರ್ದೇಶಕರು, ಕಾನೂನು ಮಾಪನ ಇಲಾಖೆ ಇವರು ಈ ಮುಂದಿನಂತೆ ಉತ್ತರಿಸಿರುತ್ತಾರೆ.

> "ಪೂರ್ವ–ಮುದ್ರಿತ ಮಾಹಿತಿಯನ್ನು ಒಟ್ಟುಗೊಳಿಸಿ ಒಂದು ಕಡೆ ಮುದ್ರಿಸುವುದನ್ನು ಹಾಗೂ ಮತ್ತೊಂದು ಕಡೆ ಆನ್‌ಲೈನ್

ಮಾಹಿತಿಯನ್ನು ಒಟ್ಟುಗೊಳಿಸಿ ಮುದ್ರಿಸುವುದನ್ನು ಕಾನೂನು ಮಾಪನ (ಪ್ಯಾಕುಗೊಂಡ ಸರಕುಗಳು) ನಿಯಮಗಳು, 2011 ("ಎಲ್‌ಎಂಪಿಸಿ ನಿಯಮಗಳು")ರ 2(ಹೆಚ್) ನಿಯಮದಡಿಯಲ್ಲಿ ಅಂಗೀಕರಿಸಿದ್ದು, ಇದು, ಪ್ಯಾಕಾದ ಕುಡಿಯುವ ನೀರನ್ನು ಒಳಗೊಂಡ ಬಾಟಲ್‌ಗಳ ಮೆಲ್ಭಾಗ / ತುದಿಯ ಮೇಲೆ ಗರಿಷ್ಟ ಮಾರಾಟ ಬೆಲೆಯನ್ನು ಆನ್‌ಲೈನ್ ಘೋಷಣೆಯನ್ನು ಸಹ ಅಂಗೀಕರಿಸಿರುತ್ತದೆ".

ಹಾಗಾಗಿ, ಅರ್ಜಿದಾರರ ನಿಲುವನ್ನು ಎತ್ತಿಹಿಡಿಯಲಾಗಿದೆ. ಮೇಲಿನ ಸದರಿ ಸ್ಪಷ್ಟನೆಯ ಸಮರ್ಥನೆಯೊಂದಿಗೆ, ಅರ್ಜಿದಾರರು, ಅವಧಿ ಮೀರಿದ ಬಳಸದಿರುವಿಕೆಯ ಹಾಗೂ ಅನುಪಯುಕ್ತವಾಗುವ ದಿನಾಂಕಗಳನ್ನು ಹೊಂದಿದ್ದು ಅವುಗಳನ್ನು ವಶಪಡಿಸಿಕೊಂಡಿರುವುದರಿಂದ ಸದರಿ ವಸ್ತುಗಳನ್ನು ಬಿಡುಗಡೆಗೊಳಿಸಲು ಕಂಟ್ರೋಲರ್‌ರವರನ್ನು ಭೇಟಿಯಾಗಿರುತ್ತಾರೆ. ಇವರು ಸರಕುಗಳ ಬಿಡುಗಡೆ ವಿಷಯವು ಬಾಕಿಯಿರುವ ಕ್ರಿಮಿನಲ್ ಪ್ರಕರಣದಂತೆ ಮ್ಯಾಜಿಸ್ಟ್ರೇಟರ ನ್ಯಾಯಾಲಯದ ಮುಂದಿದೆಯೆಂದು ಅರ್ಜಿದಾರರಿಗೆ ತಿಳಿಸಿ ತುಂಬಾ ತಡವಾಗಿ ಉತ್ತರಿಸಿರುವುದು ಕಂಡುಬಂದಿರುತ್ತದೆ. ಆಗ, ಅರ್ಜಿದಾರರಿಗೆ ಎಲ್‌ಎಂ ಅಧಿನಿಯಮದ 36ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವೆಂದು ಆಪಾದಿಸಿ ಸಿಸಿ 829/2012 ಎಂದು ನೊಂದಾಯಿಸಲಾಗಿರುವ ಹಾಗೂ ಸಂಖ್ಯೆ ನೀಡಲಾಗಿರುವ ಕ್ರಿಮಿನಲ್ ಮೊಕದ್ದಮೆಯ ಬಗ್ಗೆ ತಿಳಿದುಬಂದಿರುತ್ತದೆ.

ಅರ್ಜಿದರರು, ಮ್ಯಾಜಿಸ್ಟ್ರೇಟರ ಎದರು ಸರಕುಗಳನ್ನು ಬಿಡುಗಡೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಯನ್ನು, ಪ್ರಕರಣದ ಗುಣಾರ್ಹತೆಗಳನ್ನು ತಿಳಿಸದೆ ಹಲವಾರು ತಾಂತ್ರಿಕ ಕಾರಣಗಳ ಆಧಾರದ ಮೇಲೆ ತಿರಸ್ಕರಿಸಲಾಗಿರುತ್ತದೆಂದು ಹೇಳಲಾಗಿದೆ.

3. ಅರ್ಜಿದಾರ – ಕಂಪನಿಯ ವ್ಯವಸ್ಥಾಪನಾ ನಿರ್ದೇಶಕರ ವಿರುದ್ಧ ಮಾಡಲಾದ ದೂರನ್ನು, ಅರ್ಜಿದಾರ–ಕಂಪನಿಯು ವ್ಯವಸ್ಥಾಪನ ನಿರ್ದೇಶಕರನ್ನು ಎಂದಿಗೂ ಹೊಂದಿರಲಿಲ್ಲವೆಂದು ತಪ್ಪಾಗಿ ರೂಪಿಸಿದೆ. ಕಂಪನಿಯ ಯಾರೇ ಅಧಿಕಾರಿಗೆ

ವಹಿಸಿಕೊಟ್ಟಿರುವಂಥ ಯಾವುದೇ ಪ್ರತಿನಿಧಿಕ ಹೊಣೆಗಾರಿಕೆ ಇರುವುದಿಲ್ಲ. ಅದೊಂದೇ ಕಾರಣಕ್ಕೆ ದೂರು ವಿಫಲವಾಗುತ್ತದೆ. ಮುಖ್ಯವಾಗಿ ಕಂಪನಿಯನ್ನು ಖುದ್ದಾಗಿ ಆಪಾದಿತ ಸ್ಥಾನದಲ್ಲಿಟ್ಟಿರುವುದಿಲ್ಲ. ಇದು ದೂರು ವಿಫಲವಾಗಲು ಮತ್ತೊಂದು ಗುರುತರವಾದ ಕಾರಣವಾಗಿರುತ್ತದೆಯೆಂದು ವಾಸಿಸಿದ್ದಾರೆ..

ಎಲ್‌ಎಂಪಿಸಿ ನಿಯಮಗಳ 8(1)ನೇ ನಿಯಮವು, ನಿಯಮದಡಿಯಲ್ಲಿ ಮಾಡಬೇಕೆಂದು ಅಗತ್ಯಪಡಿಸಿದ ಪ್ರತಿಯೊಂದು ಘೋಷಣೆಯನ್ನು ಪ್ರಧಾನ ಪ್ರದರ್ಶನ ಪ್ಯಾನಲ್‌ನ ಮೇಲೆ ಕಾಣಿಸತಕ್ಕದ್ದೆಂದು ನಿರ್ದಿಷ್ಟವಾಗಿ ಉಪಬಂಧ ಕಲ್ಪಿಸುತ್ತದೆ. ಪ್ರಧಾನ ಪ್ರದರ್ಶನ ಪ್ಯಾನಲ್‌ನ್ನು, ನಿಯಮಗಳಡಿಯಲ್ಲಿ ಅಗತ್ಯಪಡಿಸಿದ ಮಾಹಿತಿಯನ್ನು ನೀಡಬೇಕಾಗಿರುವೆಡೆ ಪ್ಯಾಕಾಗಿರುವ ಒಟ್ಟು ಮೇಲ್ಮೈ ಜಾಗವೆಂದು 2(ಎಚ್) ನಿಯಮದಡಿಯಲ್ಲಿ ಪರಿಭಾಷಿಸಲಾಗಿರುತ್ತದೆ. 2(ಎಚ್) ನಿಯಮವು ನಿರ್ದಿಷ್ಟವಾಗಿ, ಎಲ್ಲಾ ಪೂರ್ವ–ಮುದ್ರಿತ ಮಾಹಿತಿಯನ್ನು ಒಟ್ಟಿಗೆ ಸೇರಿಸಿ, ಒಂದು ಜಾಗದಲ್ಲಿ ನೀಡಬೇಕೆಂದು ಹಾಗೂ ಮತ್ತೊಂದು ಜಾಗದಲ್ಲಿ ಆನ್–ಲೈನ್ ಮಾಹಿತಿಯನ್ನು ಒಟ್ಟುಗೂಡಿಸಿ ನೀಡಬೇಕೆಂದು ಉಪಬಂಧವನ್ನು ಕಲ್ಪಿಸುತ್ತದೆ. 60ನೇ ನಿಯಮದಲ್ಲೂ ಸಹ, ನಿರ್ದಿಷ್ಟವಾಗಿ, ಪ್ಯಾಕಗೊಂಡ ಉತ್ಪನ್ನವು, ಅದರ ಹೊರಮೈ ಮೇಲಾಗಲೀ ಇಲ್ಲವೆ ಪ್ಯಾಕುಗೊಂಡ ಉತ್ಪನ್ನದ ಮೇಲೆ ಭದ್ರವಾಗಿ ಅಂಟಿಸಿರುವ ಚೀಟಿಯ ಮೇಲಾಗಲಿ ಘೋಷಣೆಗಳನ್ನು ಹೊಂದಿರತಕ್ಕದ್ದೆಂದು ಹೇಳುತ್ತದೆ.

ಬಾಟಲ್ ಮೇಲೆ ನೇರವಾಗಿ ಚಿಲ್ಲರೆ ಮಾರಾಟ ಬೆಲೆಯ ಆನ್‌ಲೈನ್ ಮುದ್ರಣ ಮಾಡುವುದು ತೀರಾ ಸಾಮಾನ್ಯವಾದ ರೂಢಿಯಾಗಿರುತ್ತದೆ ಹಾಗೂ ಇದನ್ನು ಬೆಂಗಳೂರನ್ನು ಒಳಗೊಂಡಂತೆ ಇಡೀ ದೇಶದಾದ್ಯಂತ ಅಸಂಖ್ಯಾತ ಉತ್ಪಾದಕರು ಹಾಗೂ ವಿತರಕರು ಅನುಸರಿಸುತ್ತಿದ್ದಾರೆಂದೂ ಪ್ರಸ್ತಾಪಿಸಿರುತ್ತಾರೆ. ಆದಾಗ್ಯೂ, ಅರ್ಜಿದಾರ ಕಂಪನಿ ಮಾತ್ರವೇ ಅಧಿನಿಯಮ ಹಾಗೂ ನಿಯಮಗಳ ಉಲ್ಲಂಘನೆಯ ಅಪಾದನೆ ಹೊತ್ತ ದೂರನ್ನು ದಾಖಲಿಸಿಕೊಂಡಿರುತ್ತದೆ.

ಸರಕುಗಳನ್ನು ವಶಪಡಿಸಿಕೊಂಡಿರುವುದು ಪ್ರಾಮಾಣಿಕ ತಪ್ಪು ಗ್ರಹಿಕೆಯಿಂದ ಎಂದು ಭಾವಿಸಿದ ಮೇಲೆ ಸಂಬಂಧಪಟ್ಟ ಅಧಿಕಾರಿಗೆ ಕಾನೂನು ಮಾಪನ

ನಿರ್ದೇಶಕರು ನೀಡಿದ ಅಭಿಪ್ರಾಯವು ವೇದ್ಯವಾದಗಲಾದರೂ ಸರಕುಗಳನ್ನು ಬಿಡುಗಡೆಗೊಳಿಸಲೇ ಬೇಕಾಗಿತ್ತೆಂದು ವಾದಿಸಲಾಗಿರುತ್ತದೆ. ಅಧಿಕಾರಿಯು ಸರಕುಗಳನ್ನು ಬಿಡುಗಡೆಗೊಳಿಸಲು ಮಾತ್ರ ವಿಫಲವಾಗಿರದೆ, ಸರಕುಗಳ ಬಿಡುಗಡೆಗಾಗಿ ಮ್ಯಾಜಿಸ್ಟ್ರೇಟ್‌ರ ನ್ಯಾಯಾಲಯದ ಎದುರು ಅರ್ಜಿದಾರನು ಸಲ್ಲಿಸಿರುವ ಅರ್ಜಿಯನ್ನು ಸಹ ನಿರಾಕರಿಸಿರುತ್ತಾರೆ. ಹಾಗಾಗಿ, ಸರಕುಗಳು ಅವುಗಳ ಉಪಯುಕ್ತ ಅವಧಿಯನ್ನು ಹಾಗೂ ನಿರ್ಧಿಷ್ಟಪಡಿಸಿದ ದಿನಾಂಕಗಳನ್ನು ಮೀರಿದ ಕಾರಣದಿಂದ ಉಂಟಾದ ನಷ್ಟಕ್ಕೆ ಪರಿಹಾರವನ್ನು ಅರ್ಜಿದಾರರು ಕ್ಲೇಮುಮಾಡಿರುತ್ತಾರೆಂದು ವಾದಿಸಲಾಗಿರುತ್ತದೆ.

4. ಸರ್ಕಾರವು ಅರ್ಜಿಯನ್ನು ಪ್ರತಿರೋಧಿಸಿದ್ದು, ಸರ್ಕಾರದ ಪರ ಮಾನ್ಯ ನ್ಯಾಯವಾದಿಗಳು, 17.05.2012 ರಂದು ಕಾನೂನು ಮಾಪನ ಸಹಾಯಕ ಕಂಟ್ರೋಲರ್‌ರೊಂದಿಗೆ ಇನ್ಸ್‌ಸ್ಪೆಕ್ಟರ್‌ರವರು ಎರಡನೇ ಪ್ರತ್ಯರ್ಜಿದಾರ ಸಂಸ್ಥೆಯ ಆವರಣಕ್ಕೆ ಭೇಟಿನೀಡಿ, ಪರಿಶೀಲನೆಯ ಸಮಯದಲ್ಲಿ ಅರ್ಜಿದಾರರಿಗೆ ಸಂಬಂಧಿಸಿದ ಸರಕುಗಳನ್ನು ಜಪ್ತಿಮಾಡಿಕೊಂಡಿರುತ್ತಾರೆ. ಇವರ ಪ್ರಕಾರ ಎಲ್‌ಎಂ ಅಧಿನಿಯಮದ 18ನೇ ಪ್ರಕರಣ ಹಾಗೂ ಎಲ್‌ಎಂಪಿಸಿ ನಿಯಮಗಳ 4, 6(1)(ಇ) ಹಾಗೂ 6(3) ನಿಯಮಗಳನ್ನು ಪಾಲಿಸಿರುವುದಿಲ್ಲವೆಂದಾಗುತ್ತದೆ. ಮತ್ತು ಅದು ಎಲ್‌ಎಂ ಅಧಿನಿಯಮದ 36(1)ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವಾಗಿರುತ್ತದೆ. ನಿಯಮಗಳಡಿಯಲ್ಲಿ, ಘೋಷಣೆಗಳಿಗೆ ಸಂಬಂಧಿಸಿದಂತೆ ಲೇಬಲನ್ನು ಅಂಟಿಸಿದ್ದಲ್ಲಿ, 6(1) ನಿಯಮದಡಿಯಲ್ಲಿನ ಎಲ್ಲಾ ಮಾಹಿತಿಯನ್ನು ಲೇಬಲ್ ಮೇಲೆಯೂ ಘೋಷಿಸಲೇ ಬೇಕಾಗಿರುತ್ತದೆಂದು ವಾದಿಸಲಾಗಿರುತ್ತದೆ. ಅರ್ಜಿದಾರರು, ಲೇಬಲ್ ಮೇಲೆ ಪ್ಯಾಕೇಜ್‌ನ ಚಿಲ್ಲರೆ ಮಾರಾಟ ಬೆಲೆಯನ್ನು ಸೂಚಿಸಲು ವಿಫಲರಾಗಿದ್ದು, ಎಲ್‌ಎಂಪಿಸಿ ನಿಯಮಗಳ 6(ಸಿ) 6(ಸಿ) ನಿಯಮ ಹಾಗೂ 6(3) ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

ಎಲ್‌ಎಂಪಿಸಿ ನಿಯಮಗಳ 8(1) ನಿಯಮ ಹಾಗೂ ಇ(ಹೆಚ್) ನಿಯಮಗಳು, ಲೇಬಲ್‌ನ್ನು ಪ್ಯಾಕೇಜ್ ಮೇಲೆ ಅಂಟಿಸಿರುವುದರಿಂದ, ಪ್ರಶ್ನಿತ

ಪ್ಯಾಕೇಜ್‌ಗಳಿಗೆ ಅನ್ವಯವಾಗತಕ್ಕದ್ದಲ್ಲವೆಂದು ವಾದಿಸಲಾಗಿರುತ್ತದೆ. 4 ಹಾಗು 6(1) ನೇ ನಿಯಮಗಳು ಅನ್ವಯವಾಗುವಂತಹ ನಿಯಮಗಳಾಗಿವೆ.

ಮರು ಭರ್ತಿ ಹಾಗೂ ಮರುಬಳಕೆಗಾಗಿ ಗ್ರಾಹಕರು ಹಿಂತಿರುಗಿಸ ಬಹುದಾದಂಥ ಮೃದು ಪೇಯ ಹಾಗೂ ಪಾನೀಯಗಳನ್ನು ಒಳಗೊಂಡ ಬಾಟಲುಗಳಿಗೆ ಮಾತ್ರ ಚಿಲ್ಲರೆ ಮಾರಾಟ ಬೆಲೆಯನ್ನು, ಅವುಗಳ ಬಿರುಡೆ ಅಥವ ಬಾಟಲ್ ಮೇಲೆ ಅಥವಾ ಎರಡೂ ಕಡೆ ಸೂಚಿಸಬಹುದಾಗಿರುತ್ತದೆಂದು ವಾದಿಸಲಾಗಿರುತ್ತದೆ.

5. ಮೇಲಿನ ಪರಸ್ಪರ ವಿರುದ್ಧವಾದ – ವಿವಾದಗಳ ಹಿನ್ನಲೆಯಲ್ಲಿ, ಎಸಗಲಾಗಿದೆಯೆಂದು ಆರೋಪಿಸಿರುವ ಅಪರಾಧವನ್ನು ಎಲ್‌ಎಂ ಅಧಿನಿಯಮದ 36ನೇ ಪ್ರಕರಣದಡಿಯಲ್ಲಿ ದಂಡನೀಯವಾಗಿದೆಯೆಂದು ಸೂಚಿಸ ಬೇಕಾಗಿರುತ್ತದೆ. ಸದರಿ ಉಪಬಂಧವನ್ನು ಪರಾಮರ್ಶನಕ್ಕಾಗಿ ಈ ಮುಂದೆ ಉದ್ಧರಿಸಲಾಗಿರುತ್ತದೆ.

> "36. **ಸ್ಟಾಂಡರ್ಡೇತರ ಪ್ಯಾಕೇಜ್‌ಗಳು ಮುಂತಾದವುಗಳ ಮಾರಾಟಕ್ಕೆ ಸಂಬಂಧಿಸಿದ ದಂಡ.**– ಯಾರೇ ಉತ್ಪಾದಕರು, ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ಪ್ಯಾಕೇಜ್ ಮೇಲಿನ ಘೋಷಣೆಗಳನ್ನು ದೃಢೀಕರಿಸದಂಥ ಯಾವುದೇ ಪೂರ್ವ–ಪ್ಯಾಕೇಜ್ಡ್ ಸರಕಿನ ಮಾರಾಟಕ್ಕೆ ಸಂಬಂಧಿಸಿದಂತೆ ಪ್ಯಾಕುಮಾಡಿದ್ದರೆ, ಆಮದು ಮಾಡಿಕೊಂಡಿದ್ದರೆ, ಮಾರಾಟ ಮಾಡಿದ್ದರೆ, ವಿತರಣೆ ಮಾಡಿದ್ದರೆ, ಬಿಡುಗಡೆಗೊಳಿಸಿದ್ದರೆ ಅಥವಾ ಅನ್ಯಥಾ ಮಾರಾಟಕ್ಕಾಗಿ ವರ್ಗಾವಣೆ ಮಾಡಿದರೆ, ಕೊಡಮಾಡಿದರೆ, ಪ್ರದರ್ಶಿಸಿದರೆ ಅಥವಾ ಸ್ವಾಧೀನಪಡಿಸಿಕೊಂಡರೆ ಅಥವಾ ಮಾರಾಟ ಮಾಡುವುದಕ್ಕೆ, ವಿತರಣೆ ಮಾಡುವುದಕ್ಕೆ, ಬಿಡುಗಡೆ ಮಾಡುವುದಕ್ಕೆ ಅಥವಾ ಅನ್ಯಥಾ ವರ್ಗಾವಣೆ ಮಾಡುವುದಕ್ಕೆ, ಕೊಡಮಾಡುವುದಕ್ಕೆ ಅಥವಾ ಪ್ರದರ್ಶಿಸುವುದಕ್ಕೆ ಕಾರಣನಾದರೆ, ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯೊಂದಿಗೆ, ಎರಡನೇ ಅಪರಾಧಕ್ಕೆ ಸಂಬಂಧಿಸಿದಂತೆ, ಐವತ್ತು ಸಾವಿರ

ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯೊಂದಿಗೆ ಹಾಗೂ ತರುವಾಯದ ಅಪರಾಧಕ್ಕೆ ಸಂಬಂಧಿಸಿದಂತೆ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿರದಂಥ ಆದರೆ ಒಂದು ಲಕ್ಷ ರೂಗಳಿಗೆ ವಿಸ್ತರಿಸಬಹುದಾದಂಥ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದೊಂದಿಗೆ ಅಥವಾ ಅವೆರಡರೊಂದಿಗೂ ದಂಡನೀಯವಾಗತಕ್ಕದ್ದು."

xxx

ಎಲ್‌ಎಂಪಿಸಿ ನಿಯಮಗಳ 6(1)(ಇ) ನಿಯಮದೊಂದಿಗೆ ಓದಲಾದ 4ನೇ ನಿಯಮದ ನಿರೂಪಣೆಯಲ್ಲಿ, ಪ್ಯಾಕೇಜ್ ಮೇಲೆ ಅಂಟಿಸಲಾಗಿರುವ ಲೇಬಲ್ಲು ಪ್ಯಾಕೇಜಿನ ಚಿಲ್ಲರೆ ಮಾರಾಟ ಬೆಲೆಯನ್ನು ಹೊಂದಿರಲೇಬೇಕಾಗಿದ್ದು. ಇದು ಹೇಳಲಾದಂತೆ ಇರಲಿಲ್ಲವಾದ ಕಾರಣ ಉಲ್ಲಂಘನೆಯನ್ನು ಆಪಾದಿಸಲಾಗಿದೆಯೆಂಬುದು ಮೊದಲ ಪ್ರತ್ಯರ್ಜಿದಾರರ ವಾದವಾಗಿರುತ್ತದೆ.

2(ಹೆಚ್) ನಿಯಮವು, ಪ್ರಧಾನ ಪ್ರದರ್ಶನ ಪ್ಯಾನಲ್ ಅನ್ನು ಪರಿಭಾಷಿಸಿದ್ದು ಇದು ಪ್ಯಾಕೇಜ್‌ನ ಸಂಬಂಧದಲ್ಲಿ ಅಂದರೆ ಪ್ಯಾಕೇಜ್‌ನ ಒಟ್ಟು ಮೇಲ್ಮೈ ಜಾಗ ಹಾಗು ನಿಯಮದಡಿಯಲ್ಲಿ ಒದಗಿಸಬೇಕೆಂದು ಅಗತ್ಯಪಡಿಸಿದ ಮಾಹಿತಿಗಳನ್ನು ಒಟ್ಟಿಗೆ ಸಂಯೋಜಿಸಿ, ಒಂದು ಜಾಗದಲ್ಲಿ ನೀಡಬೇಕಾಗಿರುತ್ತದೆ ಅಥವಾ ಪೂರ್ವ–ಮುದ್ರಿತ ಮಾಹಿತಿಯನ್ನು ಒಟ್ಟಿಗೆ ಸಂಯೋಜಿಸಿ ಒಂದು ಜಾಗದಲ್ಲಿ ನೀಡಬೇಕಾಗಿರುತ್ತದೆ ಹಾಗು ಮತ್ತೊಂದು ಜಾಗದಲ್ಲಿ ಆನ್–ಲೈನ್ ಮಾಹಿತಿಯನ್ನು ಒಟ್ಟಿಗೆ ಸಂಯೋಜಿಸಿ ನೀಡಬೇಕಾಗಿರುತ್ತದೆಂಬುದು ಅರ್ಜಿದಾರರ ವಾದವಾಗಿರುತ್ತದೆ.

ಅದರೊಂದಿಗೆ, ನಿಯಮಗಳಡಿಯಲ್ಲಿ ಮಾಡಬೇಕಾದ ಪ್ರತಿಯೊಂದು ಘೋಷಣೆಯು, 8ನೇ ನಿಯಮದ ನಿರೂಪಣೆಯಲ್ಲಿ ಪ್ರಧಾನ ಪ್ರದರ್ಶನ ಪ್ಯಾನಲ್ ಮೇಲೆ ಕಾಣುವಂತಿರಬೇಕು.

ಹಾಗಾಗಿ, ಬಾಟಲಿನ ಮೇಲ್ಮುದಿಯಲ್ಲಿ ಮುದ್ರಿಸಿರುವಂಥ ಚಿಲ್ಲರೆ ಮಾರಾಟ ಬೆಲೆಯನ್ನು, ಲೇಬಲ್ ಮೇಲೆ ಸೂಚಿಸದಿದ್ದಾಗ್ಯೂ, ಇದು ನಿಯಮಗಳೊಂದಿಗೆ ಸಂಗತವಾಗಿದ್ದು, ಉಲ್ಲಂಘನೆಯೆಂದು ಅರ್ಥೈಸಿಕೊಳ್ಳುವಂತಿಲ್ಲವೆಂದು ವಾದಿಸಲಾಗಿರುತ್ತದೆ.

ಬಾಟಲಿನ ಬಿರುಡೆ ಅಥವಾ ಮೇಲ್ಮುದಿಯ ಮೇಲೆ ಚಿಲ್ಲರೆ ಮಾರಾಟ ಬೆಲೆಯನ್ನು ಮುದ್ರಿಸುವುದನ್ನು 8(2)ನೇ ನಿಯಮದಡಿಯಲ್ಲಿ ಉಪಬಂಧಿಸಲಾದಂತಹ ಮೃದು ಪೇಯ, ಕುಡಿಯಲು ಸಿದ್ಧಗೊಂಡಿರುವ ಹಣ್ಣಿನ ಪಾನೀಯಗಳು ಅಥವಾ ಮರುಭರ್ತಿಗಾಗಿ (ಉತ್ಪಾದಕರಿಂದ) ಗ್ರಾಹಕನು ಬಾಟಲನ್ನು ಹಿಂದಿರುಗಿಸುವಂಥ ಬಾಟಲುಗಳಿಗಷ್ಟೇ ಅನುಮತಿಸಲಾಗಿರುತ್ತದೆಯೇ ಹೊರತು ಪ್ಯಾಕುಗೊಂಡ ನೀರಿನ ಸಂಬಂಧದಲ್ಲಿ ಅನುಮತಿ ನೀಡಿರುವುದಿಲ್ಲ.

ಮೇಲಿನ ವೈರುದ್ಯವು ಸಂಬಂಧಪಡುವಷ್ಟರ ಮಟ್ಟಿಗೆ ಪ್ಯಾಕುಗೊಂಡ ಕುಡಿಯುವ ನೀರಿನ ಬಾಟಲುಗಳ ಬಿರುಡೆ ಅಥವಾ ಮೇಲ್ಮುದಿಯ ಮೇಲೆ ಚಿಲ್ಲರೆ ಮಾರಾಟ ಬೆಲೆಯ ಘೋಷಣೆ ಮಾಡಿರುವುದರಿಂದ ನಿಯಮಗಳ ಉಲ್ಲಂಘನೆಯಾಗಿದೆಯೆಂಬ ಆಪಾದನೆಗಳೊಂದಿಗೆ, ಕರ್ನಾಟಕ ಸರ್ಕಾರದ ಕಾನೂನು ಮಾಪನ ಇಲಾಖೆಯಿಂದ ನೋಟೀಸುಗಳನ್ನು ಸ್ವೀಕರಿಸಿದ್ದು, ಅರ್ಜಿದಾರರನ್ನು ಒಳಗೊಂಡಂತೆ ಭಾರತೀಯ ಪಾನೀಯಗಳ ಸಂಘ ನವದೆಹಲಿ ಇದು ತನ್ನ ಬಹುತೇಕ ಸದಸ್ಯರ ಪರವಾಗಿ ನಿರ್ದೇಶಕರು, ಕಾನೂನು ಮಾಪನ, ನವದೆಹಲಿ ಇವರಿಗೆ ಒಂದು ನಿವೇದನೆ ಸಲ್ಲಿಸಿದ್ದು 20.06.2012ರ ಅರ್ಜಿಯಲ್ಲಿ ಇದು ಅನುಬಂಧ–ಜಿ ಯಾಗಿರುವುದೆಂದು ಕಂಡುಬರುತ್ತದೆ.

ನಿರ್ದೇಶಕರು, ಕಾನೂನು ಮಾಪನ ಇವರು ಕಂಟ್ರೋಲರ್, ಕಾನೂನು ಮಾಪನ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಪತ್ರವನ್ನು ಬರೆದು, 26.07.2012ರ ಪತ್ರವ್ಯವಹಾರದ ಮೇರೆಗೆ ಈ ಮುಂದಿನ ಸ್ಪಷ್ಟನೆಯನ್ನು ಒದಗಿಸಿದ್ದು,

ಇದರ ಪ್ರತಿಯು ಅನುಬಂಧ–ಹೆಚ್ ಆಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:

"ಡಬ್ಲ್ಯೂಎಂ–9(37)/2012
ಭಾರತ ಸರ್ಕಾರ
ಗ್ರಾಹಕ ವ್ಯವಹಾರಗಳು,
ಆಹಾರ ಹಾಗು ಸಾರ್ವಜನಿಕ ವಿತರಣಾ
ಮಂತ್ರಾಲಯ
ಗ್ರಾಹಕರ ವ್ಯವಹಾರಗಳ ಇಲಾಖೆ
ಕಾನೂನು ಮಾಪನ ವಿಭಾಗ

ಕೃಷಿ ಭವನ, ನವದೆಹಲಿ–01
ದಿನಾಂಕ: 26.07.2012

ಇವರಿಗೆ,

ನಿಯಂತ್ರಕರು,
ಕಾನೂನು ಮಾಪನ ಇಲಾಖೆ
ಕರ್ನಾಟಕ ಸರ್ಕಾರ,
ಬೆಂಗಳೂರು.

ವಿಷಯ: ಪ್ಯಾಕುಗೊಂಡ ಕುಡಿಯುವ ನೀರನ್ನು ಒಳಗೊಂಡ ಬಾಟಲುಗಳ ಬಿರುಡೆ / ಮೇಲ್ಮುದಿಯ ಮೇಲೆ ಗರಿಷ್ಟ ಮಾರಾಟ ಬೆಲೆಯ ಘೋಷಣೆ – ಕುರಿತಂತೆ.

ಮಾನ್ಯರೆ,

ಮೇಲೆ ನಮೂದಿಸಿದ ವಿಷಯವನ್ನು ಕುರಿತಂತೆ 20.06.2012 ರಂದಿನ ಪತ್ರ ಸಂ. ಐಬಿಎ/35/11–12ಕ್ಕೆ ಉಲ್ಲೇಖಿಸಲು ಹಾಗೂ

ಪೂರ್ವ–ಮುದ್ರಿತ ಮಾಹಿತಿಯ ಘೋಷಣೆಯನ್ನು ಒಟ್ಟುಗೂಡಿಸಿ, ಒಂದೇ ಕಡೆ ನೀಡಬೇಕಿರುತ್ತದೆ ಹಾಗೂ ಮತ್ತೊಂದು ಕಡೆ ಆನ್–ಲೈನ್ ಕಾನೂನು ಮಾಪನ ಮಾಹಿತಿಯನ್ನು ಒಟ್ಟುಗೂಡಿಸಿ ನೀಡಬೇಕಿರುತ್ತದೆಂಬುದನ್ನು (ಪ್ಯಾಕುಗೊಂಡ ಸಾಮಾಗ್ರಿಗಳು) ನಿಯಮಗಳು, 2011ರ 2ನೇ ನಿಯಮದ (ಹೆಚ್) ಉಪ–ನಿಯಮದಡಿಯಲ್ಲಿ ಅಂಗೀಕರಿಸಿದ್ದು, ಇದು ಪ್ಯಾಕುಗೊಂಡ ಕುಡಿಯುವ ನೀರನ್ನು ಒಳಗೊಂಡ ಬಾಟಲುಗಳ ಬಿರುಡೆ/ಮೇಲ್ತುದಿಯ ಮೇಲೆ ಗರಿಷ್ಟ ಮಾರಾಟ ಬೆಲೆಯ ಆನ್‌ಲೈನ್ ಘೋಷಣೆಯನ್ನು ಅಂಗೀಕರಿಸಿರುತ್ತದೆಂದು ಹೇಳಲು ಈ ಕೆಳಗೆ ಸಹಿ ಮಾಡಲಾಗಿರುತ್ತದೆ.

2. ಆದ್ದರಿಂದ, ಅಧಿನಿಯಮ ಹಾಗೂ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಕೈಗೊಳ್ಳಬಹುದಾದ ಅವಶ್ಯಕ ಕ್ರಮಗಳಿಗೆ ಕೋರಲಾಗಿರುತ್ತದೆ.

ತಮ್ಮ ನಂಬುಗೆಯ

ಸಹಿ/–
(ಬಿ.ಎನ್. ದೀಕ್ಷಿತ್)
ನಿರ್ದೇಶಕರು, ಕಾನೂನು ಮಾಪನ
ದೂರವಾಣಿ ಸಂ: 011–23389489, 23386194

ಸದರಿ ಪ್ರಾಧಿಕಾರವು ಹೊರಡಿಸಿದ ಮೇಲಿನ ಸ್ಪಷ್ಟನೆಯ ಜೊತೆಗೆ, ಪ್ಯಾಕುಮಾಡಲು ನಮೂನೆಯಲ್ಲಿ, ಸರಕುಗಳನ್ನು ಪ್ಯಾಕುಮಾಡುವ ಪೂರ್ವದ ಹಾಗೂ ಮಾರಾಟ ಮಾಡುವುದಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಉಪಬಂಧಿಸಿರುವಂಥ 4ನೇ ನಿಯಮವು, ಯಾರೇ ವ್ಯಕ್ತಿಗೆ, ವಸ್ತುಗಳು ನಿಯಮಗಳಡಿಯಲ್ಲಿ ಮಾಡಬೇಕೆಂದು ಅಗತ್ಯಪಡಿಸಿರುವಂಥ ಘೋಷಣೆಗಳನ್ನು

ಪ್ಯಾಕುಗೊಳ್ಳುವುದಕ್ಕೆ ಮೊದಲು ಅವುಗಳ ಮೇಲೆ ಅಥವಾ ಅದರ ಮೇಲೆ ಭದ್ರವಾಗಿ ಅಂಟಿಸಿದ ಲೇಬಲ್ ಮೇಲೆ ಹೊಂದಿರಬೇಕಾದಂಥ ವಿಷಯಗಳು ಅಂಥ ಪ್ಯಾಕೇಜು ಹೊಂದಿರದ ಹೊರತು ಯಾವುದೇ ವಸ್ತುವನ್ನು ಪ್ಯಾಕುಮಾಡುವ ಪೂರ್ವದಲ್ಲಿ ಮಾರಾಟ ಮಾಡಲು ಹಂಚಿಕೆ ಮಾಡಲು ಅಥವಾ ಬಿಡುಗಡೆಮಾಡಲು ಅನುಮತಿ ನೀಡತಕ್ಕದ್ದಲ್ಲ. (ಇದಕ್ಕೆ ನನ್ನಿಂದ ಒತ್ತುನೀಡಲಾಗಿದೆ)

''ಅಥವಾ ಲೇಬಲ್ ಮೇಲೆ'' ಎಂಬ ಪದಗಳು 2(ಹೆಚ್) ನಿಯಮಗಳೊಂದಿಗೆ ಸಾಮ್ಯತೆಯನ್ನು ಹೊಂದಿರಬೇಕಾಗಿರುತ್ತದೆ.

6ನೇ ನಿಯಮವೂ ಸಹ ಈ ಸಂಬಂಧದಲ್ಲಿ ಸಾಮ್ಯತೆಯನ್ನು ಹೊಂದಿದ್ದು, ಅದು ಈ ಮುಂದಿನಂತಿರುತ್ತದೆ.

> ''**6. ಪ್ರತಿಯೊಂದು ಪ್ಯಾಕೇಜಿನ ಮೇಲೂ ಮಾಡಬೇಕಾದ ಘೋಷಣೆಗಳೂ.–** (1) ಪ್ರತಿಯೊಂದು ಪ್ಯಾಕೇಜು, ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮಾಡಿರುವ ನಿಶ್ಚಿತ, ಸ್ಪಷ್ಟ ಹಾಗೂ ಎದ್ದುಕಾಣುವಂತೆ ಅದರ ಮೇಲೆ ಅಥವಾ ಅದಕ್ಕೆ ಭದ್ರವಾಗಿ ಅಂಟಿಸಿದ ಲೇಬಲ್ ಮೇಲೆ,
>
> (ಇದಕ್ಕೆ ನನ್ನಿಂದ ಒತ್ತುನೀಡಲಾಗಿದೆ)
>
> (ಎ) ಪ್ರತಿಯೊಂದು ಪ್ಯಾಕೇಜಿನ ಮೇಲೆ, ಉತ್ಪಾದಕರ ಹೆಸರು ಮತ್ತು ವಿಳಾಸ, ಅಥವಾ ಉತ್ಪಾದಕರು ಪ್ಯಾಕರ್ ಆಗಿರದಿದ್ದ ಸಂದರ್ಭದಲ್ಲಿ ಉತ್ಪಾದಕರ ಹೆಸರು ಹಾಗೂ ವಿಳಾಸ ಮತ್ತು ಯಾವುದೇ ಆಮದುಗೊಂಡ ಪ್ಯಾಕೇಜಿನ ಸಂಬಂಧದಲ್ಲಿ ಆಮದುದಾರನ ಹೆಸರು ಹಾಗೂ ವಿಳಾಸವನ್ನು ನಮೂದಿಸತಕ್ಕದ್ದು.

ವಿವರಣೆ I – ಕಂಪನಿಯ ಯಾವುದೇ ಹೆಸರು ಹಾಗೂ ವಿಳಾಸವನ್ನು, 'ತಯಾರಿಸಿದವರು' ಅಥವಾ 'ಪ್ಯಾಕುಮಾಡಿದವರು' ಎಂಬ ಯುಕ್ತ ಪದಗಳಿಲ್ಲದೆ ಲೇಬಲ್ ಮೇಲೆ ನಮೂದಿಸಿದಲ್ಲಿ, ಅಂಥ ಹೆಸರು ಹಾಗೂ ವಿಳಾಸವನ್ನು ಉತ್ಪಾದಕರದೆಂದೇ ಗ್ರಹಿಸತಕ್ಕದ್ದು ಹಾಗೂ ತದನುಸಾರವಾಗಿಯೇ ಹೊಣೆಗಾರಿಕೆಯನ್ನು ಗೊತ್ತುಪಡಿಸತಕ್ಕದ್ದು;

ವಿವರಣೆ II – ಬ್ರಾಂಡ್‌ನ ಹೆಸರು ಹಾಗೂ ಬ್ರಾಂಡ್ ಮಾಲೀಕನ ವಿಳಾಸವು, ಮಾರುಕಟ್ಟೆದಾರಕರಂತೆ ಲೇಬಲ್ ಮೇಲೆ ಕಾಣಿಸಿಕೊಂಡಲ್ಲಿ, ತರುವಾಯ, ಬ್ರಾಂಡ್ ಮಾಲೀಕರು ಈ ನಿಯಮಗಳ ಯಾವುದೇ ಉಲ್ಲಂಘನೆಗೆ ಸಂಬಂಧಿಸಿದಂಥ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಹಾಗೂ ಅಗತ್ಯಪಡಿಸಬಹುದಾದಂಥ ಕ್ರಮವನ್ನು ಭಾವಿತ ತಯಾರಕರ ವಿರುದ್ಧ ಆರಂಭಿಸತಕ್ಕದ್ದು ಹಾಗೂ ಲೇಬಲ್‌ನಲ್ಲಿ ಕಾಣಿಸಿದ ಒಂದಕ್ಕಿಂತ ಹೆಚ್ಚು ಹೆಸರು ಹಾಗೂ ವಿಳಾಸವು ಕಾಣಿಸಿಕೊಂಡ ಸಂದರ್ಭದಲ್ಲಿ ಮೊದಲ ಸ್ಥಾನದಲ್ಲಿ ಲೇಬಲ್ ಮೇಲೆ ಸೂಚಿಸಿರುವ ಉತ್ಪಾದಕರ ವಿರುದ್ಧ ಕ್ರಮ ಜರುಗಿಸತಕ್ಕದ್ದೇ ಹೊರತು ಎಲ್ಲರ ವಿರುದ್ಧವಲ್ಲ.

ವಿವರಣೆ III– ಉಪ–ನಿಯಮದ ಉಪಬಂಧಗಳು ಆಹಾರ ವಸ್ತುಗಳನ್ನು ಒಳಗೊಂಡ ಪ್ಯಾಕೇಜ್‌ಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ. ಬದಲಾಗಿ ಆಹಾರ ಸುರಕ್ಷತೆ ಹಾಗೂ ಮಾನಕಗಳ ಅಧಿನಿಯಮ, 2006 (2006ರ 34) ಹಾಗೂ ಅದರಡಿಯಲ್ಲಿ ರೂಪಿಸಿದ ನಿಯಮಗಳ ಅಗತ್ಯತೆಗಳು ಅನ್ವಯವಾಗತಕ್ಕದ್ದು.

(ಬಿ) ಪ್ಯಾಕೇಜ್‌ನಲ್ಲಿ ಒಳಗೊಂಡಿರುವ ವಸ್ತುಗಳ ಸಾಮಾನ್ಯ ಅಥವಾ ಸಾರ್ವತ್ರಿಕ ಹೆಸರುಗಳನ್ನು ಹಾಗೂ ಒಂದಕ್ಕಿಂತ ಹೆಚ್ಚಿನ

ವಸ್ತುಗಳನ್ನು ಒಳಗೊಂಡ ಪ್ಯಾಕೇಜಿನ ಸಂದರ್ಭದಲ್ಲಿ ಪ್ರತಿಯೊಂದು ಉತ್ಪನ್ನದ ಹೆಸರು ಹಾಗೂ ಸಂಖ್ಯೆ ಅಥವಾ ಪ್ರಮಾಣವನ್ನು ಪ್ಯಾಕೇಜಿನ ಮೇಲೆ ನಮೂದಿಸತಕ್ಕದ್ದು.

(ಸಿ) ಪ್ಯಾಕೇಜಿನಲ್ಲಿ ಒಳಗೊಂಡ ಸರಕಿನ ತೂಕ ಅಥವಾ ಅಳತೆಯ ಪ್ರಮಾಣಕ ಘಟಕದ ನಿರೂಪಣೆಯಲ್ಲಿನ ನಿವ್ವಳ ಪರಿಮಾಣ ಅಥವಾ ಸರಕನ್ನು ಎಲ್ಲಿ ಪ್ಯಾಕುಮಾಡಲಾಯಿತು ಅಥವಾ ಮಾರಾಟ ಮಾಡಲಾಯಿತೆಂಬ ಸಂಖ್ಯೆ ಅಥವಾ ಪ್ಯಾಕೇಜನ್ನು ಒಳಗೊಂಡ ಸರಕಿನ ಸಂಖ್ಯೆಗಳನ್ನು ನಮೂದಿಸತಕ್ಕದ್ದು.

(ಡಿ) ವಸ್ತುಗಳನ್ನು ಉತ್ಪಾದಿಸಿದ ಅಥವಾ ಪ್ಯಾಕು ಮಾಡುವುದಕ್ಕೆ ಪೂರ್ವದ ಅಥವಾ ಆಮದು ಮಾಡಿಕೊಂಡಂಥ ತಿಂಗಳು ಹಾಗೂ ವರ್ಷವನ್ನು ಪ್ಯಾಕೇಜಿನಲ್ಲಿ ನಮೂದಿಸತಕ್ಕದ್ದು.

ಪರಂತು, ಆಹಾರದ ಸರಕುಗಳನ್ನು ಒಳಗೊಂಡ ಪ್ಯಾಕೇಜುಗಳೀಗೆ ಸಂಬಂದಿಸಿದಂತೆ ಆಹಾರ ಸುರಕ್ಷತೆ ಹಾಗೂ ಮಾನಕಗಳ ಅಧಿನಿಯ, 2006 (2006 ರ 34) ಹಾಗೂ ಅದರಡಿಯಲ್ಲಿ ರೂಪಿಸಿದ ನಿಯಮಗಳ ಉಪಬಂಧಗಳನ್ನು ಅನ್ವಯಿಸತಕ್ಕದ್ದು.

ಸೂಚನೆ: ಹಸ್ತಪ್ರತಿ ಪುಟ ಸಂಖ್ಯೆ '24'ರಲ್ಲಿನ ಮೊದಲ ಪ್ಯಾರಾವನ್ನು ಬೆರಳಚ್ಚು ಮಾಡಿ

ಅಲ್ಲದೆ ಪರಂತು, ಪ್ರಸಾಧನ ಉತ್ಪನ್ನಗಳನ್ನು ಒಳಗೊಂಡ ಪ್ಯಾಕೇಜುಗಳಿಗೆ ಸಂಬಂಧಿಸಿದಂತೆ ಔಷದಗಳು ಹಾಗೂ ಪ್ರಸಾದನಗಳ ನಿಯಮಗಳು, 1945ರ ಉಪಬಂಧಗಳು ಅನ್ವಯವಾಗತಕ್ಕದ್ದು.

(ಇ) ಪ್ಯಾಕೇಜಿನ ಚಿಲ್ಲರೆ ಮಾರಾಟ ಬೆಲೆಗಳನ್ನು ಹೊಂದಿರತಕ್ಕದ್ದು.

xxx

ಸದರಿ ನಿಯಮಗಳ 8(2)ನೇ ನಿಯಮವು ಮೃದು ಪೇಯ, ಸಿದ್ಧಗೊಂಡಿರುವ ಹಣ್ಣಿನ ಪಾನೀಯಗಳು ಅಥವಾ ಅಂಥದೇ ಹಿಂದಿರುಗಿಸಬಹುದಾದ ಬಾಟಲುಗಳಲ್ಲಿನ ಪ್ಯಾಕುಗೊಂಡ ಪಾನೀಯಗಳಿಗೆ ಸಂಬಂಧಿಸಿದಂತೆ ಮಾತ್ರ ಸಮರ್ಥನೀಯಗೊಳಿಸುವ ಉಪಬಂಧಗಳಾಗಿರುತ್ತವೆ. ಈ ಸಮರ್ಥನೀಯ ಉಪಬಂಧವನ್ನು, ನಿರ್ಬಂಧಕ ಉಪಬಂಧವಾಗಿ ಓದಲಾಗುವುದಿಲ್ಲ. ವಿಶೇಷವಾಗಿ, 8(1) ನಿಯಮವನ್ನು ಪ್ರಧಾನವಾಗಿ ಕಾಣುವ ಪ್ಯಾನಲ್ ಮೇಲೆ ಮಾಡಬೇಕಾದ ಘೋಷಣೆಗಳನ್ನು ಅಂಗೀಕರಿಸಿದಾಗ ಓದುವಂತಿರುವುದಿಲ್ಲ.

ಸರಕುಗಳನ್ನು ಅರ್ಜಿದಾರ ಕಂಪನಿಯು ಆವರಣದಲ್ಲಿ ಅಭಿಗ್ರಹಿಸಬಹುದಾದಲ್ಲಿ ಪ್ಯಾಕೇಜಿನ ಲೇಬಲ್ ಮೇಲೆ ಚಿಲ್ಲರೆ ಮಾರಾಟ ಬೆಲೆಯನ್ನು ಮುದ್ರಿಸದ ಮೂಲಕ ಅರ್ಜಿದಾರ ಕಂಪನಿಯು ಉಲ್ಲಂಘನೆ ಮಾಡಿದೆಯೆಂದು ಭಾವಿಸಿದರೂ ಕೂಡ, 4ನೇ ನಿಯಮಕ್ಕೆ ನೀಡಿರುವ ವಿವರಣೆಯ ಹಿನ್ನಲೆಯಲ್ಲಿ ನಕಾರಾತ್ಮಕವಾಗಿ ಉತ್ತರಿಸಬೇಕಾಗಿದ್ದು, ಈ ಮುಂದಿನಂತೆ ಓದಲಾಗಿರುತ್ತದೆ:–

''ವಿವರಣೆ.– ಉತ್ಪಾದಕರ ಆವರಣಗಳೊಳಗೆ ಚಿಲ್ಲರೆ ಮಾರಾಟ ಬೆಲೆಯ ಘೋಷಣೆಯಲ್ಲದೆ ಪ್ಯಾಕೇಜುಗಳ ಅಸ್ತಿತ್ವವನ್ನು ಈ ನಿಯಮಗಳ ಉಲ್ಲಂಘನೆಯೆಂದು ಅರ್ಥೈಸಿಕೊಳ್ಳತಕ್ಕದ್ದಲ್ಲ ಹಾಗೂ ಎಲ್ಲಾ ಪ್ಯಾಕೇಜುಗಳು, ಅವುಗಳ ಗಮ್ಯಸ್ಥಾನಕ್ಕೆ ಸಂಬಂಧಿಸಿದಂತೆ ಉತ್ಪಾದಕರ ಆವರಣಗಳನ್ನು ಬಿಡುವಾಗ ಈ ನಿಯಮದಲ್ಲಿ ಅಗತ್ಯಪಡಿಸಿದಂತೆ ಅವುಗಳ ಮೇಲಿನ ಚಿಲ್ಲರೆ ಮಾರಾಟ ಬೆಲೆಯ ಘೋಷಣೆಯನ್ನು ಹೊಂದಿರತಕ್ಕದ್ದು ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಮುಂದುವರೆದು, ವಾದವು ಕಂಪನಿಯ ವಿರುದ್ಧವಾಗಿದೆಯೆಂಬುದನ್ನು ಗಮನಿಸಲಾಗಿರುತ್ತದೆ. ಕಂಪನಿಯನ್ನು ಆಪಾದಿತವೆಂದು ಆಪಾದನೆಯನ್ನು ರೂಪಿಸದೆ ಕಂಪನಿಯ ಅಧಿಕಾರಿಯ ವಿರುದ್ಧ ಒಂದು ಕ್ರಿಮಿನಲ್ ದಾವೆಯನ್ನು ಹೂಡುವುದು ಊರ್ಜಿತವಾದುದಾಗಿರುವುದಿಲ್ಲ. ***(ಅನಿತಾ ಹಾಡ –ವಿರುದ್ಧ– ಗಾಡ್‌ಫಾದರ್ ಟ್ರಾವೆಲ್ಸ್ ಅಂಡ್ ಟೂರ್ಸ್ ಪ್ರೈವೇಟ್ ಲಿಮಿಟೆಡ್[1].)***

ಫಿರ್ಯಾದು, ಸಂಬಂಧಪಟ್ಟ ಕಂಪನಿಯ ಅಧಿಕಾರಿಗಳು ಕಂಪನಿಯ ವ್ಯವಹಾರದ ದೈನಂದಿನ ನಿರ್ವಹಣೆ ಹಾಗೂ ನಡತೆಗೆ ಸಂಬಂಧಪಟ್ಟಂತೆ ಪ್ರಭಾರದಲ್ಲಿದ್ದಾರೆಯೆ ಹಾಗೂ ಜವಾಬ್ದಾರರಾಗಿದ್ದಾರೆಯೆ ಎಂಬುದನ್ನು ಹೇಳಬೇಕಾಗಿರುತ್ತದೆ. ಒಬ್ಬ ವ್ಯಕ್ತಿಯು ಕೆಲವು ಆಪಾದನೆಗಳನ್ನು ಮಾಡಿರುವಂಥ ಅಧಿಕಾರಿಯಾಗಿದ್ದು, ಕಂಪನಿಯ ನಿರ್ವಹಣೆಯಲ್ಲಿನ ಆತನು ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಿಲ್ಲವೆಂದು ಆಪಾದಿಸಿ ಆ ಅಧಿಕಾರಿಯನ್ನೇ ಬದ್ಧನನ್ನಾಗಿಸುವುದು ಸಮರ್ಥನೀಯವಾಗಿರುವುದಿಲ್ಲವೆಂಬುದು ಕೇವಲ ಒಂದು ಹೇಳಿಕೆಯಾಗಿರುತ್ತದೆ.

ಗಮನಿಸಿ: ***ಪೆಪ್ಸಿಕೋ ಇಂಡಿಯಾ ಹೋಲ್ಡಿಂಗ್ಸ್ (ಪ್ರೈ) ಲಿಮಿಟೆಡ್ –ವಿರುದ್ಧ– ಫುಡ್ ಇನ್‌ಸ್ಪೆಕ್ಟರ್[2].***

ಮೇಲಿನದರ ಹಿನ್ನಲೆಯಲ್ಲಿ, ಅರ್ಜಿದಾರ–ಕಂಪನಿಯ ವಿರುದ್ಧ ಆರಂಭಿಸಲಾಗಿದೆಯೆಂಬ ಉದ್ದೇಶಿಸಿ ನಡಾವಳಿಗಳು ತಪ್ಪಾಗಿ ರೂಪಿತವಾಗಿವೆ. ಅರ್ಜಿದಾರರ ಸರಕುಗಳ ತರುವಾಯದ ಸಮಾಪನವು ಸ್ಪಷ್ಟವಾಗಿ ಕಾನೂನು ಬಾಹಿರವಾಗಿರುತ್ತದೆ. ನಿರ್ದೇಶಕರು, ಲೀಗಲ್ ಮೆಟ್ರೋಲಾಜಿ, ನವದೆಹಲಿ, ಇದು ನಿರ್ದಯ ಹಾಗೂ ನಿರ್ಲಕ್ಷ್ಯ ಪ್ರವೃತ್ತಿಯೆಂದು ಸೂಚಿಸುವಂಥ ಸ್ಪಷ್ಟನೆಯನ್ನು ನೀಡಿದ ಮೇಲೂ ಸಹ ಮೊದಲ ಪ್ರತ್ಯರ್ಜಿದಾರ ಇಲಾಖೆಯು ಎಚ್ಚೆತ್ತುಕೊಂಡಿರುವುದಿಲ್ಲ. ಸಮಾಪನದ ತರುವಾಯ, ಇಡೀ ಸರಕುಗಳು

1. (2012) 5ಎಸ್‌ಸಿಸಿ 661 2. (2011) 1 ಎಸ್‌ಸಿಸಿ 176

ನಿರರ್ಥಕವಾಗಿದ್ದು, ಇದರಿಂದ ನಷ್ಟವುಂಟಾಗಿ, ಇದಕ್ಕೆ ಕಾನೂನು ಮಾಪನ ಇಲಾಖೆಯೂ ನೇರವಾಗಿ ಕಾರಣವಾಗಿರುತ್ತದೆ.

ಮ್ಯಾಜಿಸ್ಟ್ರೇಟರ ನ್ಯಾಯಾಲಯವು, ವಾಸ್ತವವಾಗಿ ಕಂಪನಿಯೇ ಪ್ರಧಾನ ಆಪಾದಿತ ಸ್ಥಾನದಲ್ಲಿದ್ದಾಗ್ಯೂ, ಕಂಪನಿಯುನ್ನು ನಡಾವಳಿಯಲ್ಲಿ ಪಕ್ಷಕಾರರನ್ನಾಗಿಸಿರುವುದಿಲ್ಲದಿರುವುದು ಕಾನೂನಿನ ದೃಷ್ಟಿಯಲ್ಲಿ ದೋಷ ಪೂರ್ಣವಾಗಿದೆಯೆಂದು ಸ್ಪಷ್ಟ ಸಂದರ್ಭಗಳಿಂದಾಗಿ ಕ್ರಿಮಿನಲ್ ನಡಾವಳಿಗಳನ್ನು ಪುರಸ್ಕರಿಸಿರುತ್ತದೆ.

ತದನುಸಾರವಾಗಿ, ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.

ಅನುಬಂಧ–ಎ ಯಲ್ಲಿನ ಪ್ರಶ್ನಿತ ಆದೇಶವನ್ನು ರದ್ದುಪಡಿಸಲಾಗಿರುತ್ತದೆ. ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ, ಟ್ರಾಫಿಕ್ ನ್ಯಾಯಾಲಯ–1ರ ಕಡತದ ಮೇಲಿನ ಪ್ರಕರಣ ಸಂ. ಸಿಸಿ 829/2012 ರಲ್ಲಿನ ಫಿರ್ಯಾದು ಹಾಗೂ ನಡಾವಳಿಗಳನ್ನು ರದ್ದುಪಡಿಸಲಾಗಿರುತ್ತದೆ.

ಪ್ರತ್ಯರ್ಜಿದಾರ ಸಂ.1 ಅಭಿಗ್ರಹಿಸಿರುವ ಸರಕುಗಳು ಇನ್ನು ಹೆಚ್ಚು ಕಾಲ ಮಾರಾಟ ಮಾಡಲಾಗುವುದಿಲ್ಲವಾದ್ದರಿಂದ, ಈ ನಷ್ಟಕ್ಕೆ ಸಂಬಂಧಿಸಿದಂತೆ ಅರ್ಜಿದಾರ–ಕಂಪನಿಗೆ ಪರಿಹಾರ ನೀಡಬೇಕಾಗಿರುತ್ತದೆ ಅರ್ಜಿದಾರ–ಕಂಪನಿಯು ರಿಜಿಸ್ಟ್ರಾರ್ (ಕಂಪ್ಯೂಟರ್ಸ್) ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ತನಗೆ ಉಂಟಾದ ನಷ್ಟದ ವಿವರಗಳನ್ನು ನೀಡಿ, ರಕ್ಷಿಸಬಹುದಾದ ಮತ್ತು ಮರುಬಳಕೆ ಮಾಡಬಹುದಾದ ವಸ್ತುವನ್ನು ಗಣನೆಗೆ ಕೊಳ್ಳುವಾಗ ಸಹ ಕ್ಲೇಮನ್ನು ಸಲ್ಲಿಸತಕ್ಕದ್ದು. ಅದಕ್ಕೆ ಪ್ರತಿಯಾಗಿ, ಅವರು ಮೊದಲು ಪ್ರತ್ಯರ್ಜಿದಾರ ಹಾಗೂ ಕಲೆಕ್ಟರ್, ಕಾನೂನು ಮಾಪನ, ಕರ್ನಾಟಕ ಸರ್ಕಾರ ಬೆಂಗಳೂರು ಇವರಿಗೆ ನೋಟೀಸನ್ನು ನೀಡತಕ್ಕದ್ದು ಹಾಗೂ ವಿಚಾರಣೆಯನ್ನು ನಡೆಸುವಲ್ಲಿ ಸಂಕ್ಷಿಪ್ತ ಕಾರ್ಯವಿಧಾನವನ್ನು

ಅಂಗೀಕರಿಸಿ ಸಂದಾಯ ಮಾಡಬಹುದಾದ ನಷ್ಟ ಪರಿಹಾರವನ್ನು ಗೊತ್ತುಪಡಿಸತಕ್ಕದ್ದು. ರಿಜಿಸ್ಟ್ರಾರ್ (ಕಂಪ್ಯೂಟರ್ಸ್)ರು ಹೊರಡಿಸಿದ ಅಂಥ ಆದೇಶವೇ ಅಂತಿಮವಾಗಿರತಕ್ಕದ್ದು.

ಕಾನೂನು ಮಾಪನ ಇಲಾಖೆ, ಕರ್ನಾಟಕ ಸರ್ಕಾರ ಇದು, ಅರ್ಜಿದಾರ–ಕಂಪನಿಗೆ 15,000/– ರೂಗಳ ಮೊಬಲಗಿನ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.